ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560001**

**ಸಂಖ್ಯೆ:ಸಿ4[10]ಆರ್.ಎಂ.ಎಸ್.ಎ.ಹುದ್ದೆ46/2015-16** **ದಿನಾಂಕ: 12.06.2017**

**ಜ್ಞಾಪನಾ**

**ವಿಷಯ:** 2014-15 ರಿಂದ 2016-17ರವರೆಗೆ 462 ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲಾದ ಶಾಲೆಗಳ ಪದನಾಮ ಬದಲಾವಣೆ ಮಾಡುವ ಬಗ್ಗೆ.

**ಉಲ್ಲೇಖ:** ರಾಜ್ಯ ಯೋಜನಾ ನಿರ್ದೇಶಕರು ಎಸ್.ಎಸ್.ಎ/ಆರ್.ಎಂ.ಎಸ್.ಎ ಬೆಂಗಳೂರು ರವರ ಟಿಪ್ಪಣಿ ಪತ್ರ ದಿನಾಂಕ: 05.06.2017.

**********

**ಪ್ರಸ್ತಾವನೆ:-**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ [1]ರ ಪತ್ರದಲ್ಲಿ ರಾಜ್ಯ ಯೋಜನಾ ನಿರ್ದೇಶಕರು ಎಸ್.ಎಸ್.ಎ/ಆರ್.ಎಂ.ಎಸ್.ಎ ಬೆಂಗಳೂರು ರವರು ಆರ್.ಎಂ.ಎಸ್.ಎ ಅಡಿಯಲ್ಲಿ 2014-15 ರಿಂದ 2016-17 ರವರೆಗೆ 462 ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲಾಗಿದ್ದು, ಸದರಿ ಶಾಲೆಗಳನ್ನು ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಂದು ನಮೂದಿಸಿ ಆದೇಶ ನೀಡಲಾಗುತ್ತಿದ್ದು, ಇನ್ನು ಮುಂದೆ ಸದರಿ ಶಾಲೆಗಳನ್ನು ಹೆಸರು ಬದಲಾಯಿಸಿ ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ) ಎಂದು ನಮೂದಿಸಲು ಆದೇಶ ಹೊರಡಿಸಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಆರ್.ಎಂ.ಎಸ್.ಎ ಅಡಿಯಲ್ಲಿ ಉನ್ನತೀಕರಿಸಲಾದ ಶಾಲೆಗಳಿಗೆ ಆರ್.ಎಂ.ಎಸ್.ಎ ಮಾನದಂಡಗಳನ್ವಯ ಶಿಕ್ಷಕರ ಹುದ್ದೆ ಮಂಜೂರಾತಿ, ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದ್ದು, ಇಂತಹ ಉನ್ನತೀಕರಿಸಿದ ಶಾಲೆಗಳಲ್ಲಿ 9 ರಿಂದ 10ನೇ ತರಗತಿಯು ನೆಡೆಯುತ್ತಿರುವುದರಿಂದ 2014-15 ರಿಂದ 2016-17 ರವರೆಗೆ ಉನ್ನತೀಕರಿಸಲಾಗಿರುವ 462 ಹಿರಿಯ ಪ್ರಾಥಮಿಕ ಶಾಲೆಗಳನ್ನು ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ) ಎಂದು ಪದನಾಮ ಬದಲಾವಣೆ ಮಾಡಿಕೊಳ್ಳಲು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ:-**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ವಯ ಆರ್.ಎಂ.ಎಸ್.ಎ ವತಿಯಿಂದ ಉನ್ನತೀಕರಿಸಲಾದ 462 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 9 ರಿಂದ 10ನೇ ತರಗತಿಗಳು ನೆಡೆಯುತ್ತಿರುವುದರಿಂದ, ಇಂತಹ ಶಾಲೆಗಳನ್ನು ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ) ಎಂದು ಪದನಾಮ ಮಾಡಿಕೊಂಡು, ಇನ್ನು ಮುಂದೆ ಶಾಲಾ ಹೆಸರಿನ ನಾಮಫಲಕ, ಶಾಲೆಯ ಮೊಹರು ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸರ್ಕಾರಿ ಪ್ರೌಢಶಾಲೆ (ಆರ್.ಎಂ.ಎಸ್.ಎ) ಎಂದು ಹೆಸರು ಬದಲಾವಣೆ ಮಾಡಿಕೊಳ್ಳುವಂತೆ ಆದೇಶಿಸಿದೆ.

Kulkarni

ನಿರ್ದೇಶಕರು [ಪ್ರೌಢಶಿಕ್ಷಣ]

ಇವರಿಗೆ,

1. ರಾಜ್ಯ ಯೋಜನಾ ನಿರ್ದೇಶಕರು ಎಸ್.ಎಸ್.ಎ/ಆರ್.ಎಂ.ಎಸ್.ಎ ಬೆಂಗಳೂರು, ರವರ ಮುಂದಿನ ಕ್ರಮಕ್ಕಾಗಿ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ. ಧಾರವಾಡ/ಕಲಬುರ್ಗಿ, ರವರ ಮುಂದಿನ ಕ್ರಮಕ್ಕಾಗಿ.
3. ವಿಭಾಗೀಯ ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು/ಮೈಸೂರು/ಬೆಳಗಾವಿ/ಕಲಬುರ್ಗಿ.
4. ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
5. ನಿರ್ದೇಶಕರು [ಅಲ್ಪಸಂಖ್ಯಾತರ ಭಾಷಾ ಶಾಲೆಗಳ ನಿರ್ದೇಶನಾಲಯ] ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
6. ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ನಂ.4, ಬಿಎಸ್.ಕೆ 3ನೇ ಹಂತ, ಹೊಸ್ಕೆರೆಹಳ್ಳಿ ಲೇಔಟ್, ಬನಶಂಕರಿ, ಬೆಂಗಳೂರು.
7. ಜಂಟಿ ನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
8. ರಾಜ್ಯದ ಎಲ್ಲ ಉಪನಿರ್ದೇಶಕರು [ಆಡಳಿತ] ರವರಿಗೆ. ಇವರ ಕಾರ್ಯವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಕಳುಹಿಸಲು.
9. ರಾಜ್ಯದ ಎಲ್ಲ ಉಪನಿರ್ದೇಶಕರು [ಅಭಿವೃದ್ಧಿ] ರವರಿಗೆ. ಇವರ ಕಾರ್ಯವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಕಳುಹಿಸಲು.
10. ಹಿರಿಯ ಸಹಾಯಕ ನಿರ್ದೇಶಕರು [ಇ-ಆಡಳಿತ] ರವರಿಗೆ, ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು.
11. ಕಛೇರಿ ಪ್ರತಿ.